ಕಾವ್ಯದಲ್ಲಿ ಅಂತಃಕರಣವನ್ನೂ, ಅಂತಃಕರಣದಲ್ಲಿ ಕಾವ್ಯವನ್ನೂ ಹಂಬಲಿಸುವ ಸುಬ್ಬು ಹೊಲೆಯಾರ್ ಸಕಲೇಶಪುರದ ಹೆತ್ತೂರಿನವರು. ದೂರದರ್ಶನ ಮತ್ತು ಆಕಾಶವಾಣಿಯಲ್ಲಿ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತರು, ಈಗ ಪೂರ್ಣಾವಧಿ ಕವಿ. 'ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು', 'ಎಲ್ಲರ ಬೆರಳಲ್ಲೂ ಅಂಟಿಕೊಂಡ ದುಃಖವೇ' ಅವರ ಪ್ರಕಟಿತ ಕವನಸಂಕಲನಗಳು. ಕವಿತಾ ಲಂಕೇಶ್ ನಿರ್ದೇಶನದ 'ಕರಿಯ ಕಣ್ ಬಿಟ್ಟ' ಸುಬ್ಬು ಹೊಲೆಯಾರ್ ಅವರ ಬಾಲ್ಯವೃತ್ತಾಂತವನ್ನು ಆಧರಿಸಿದ ಸಿನಿಮಾ.

ಗುಡಿಸಲಿಗೆ ಹುಲ್ಲು ಹೊದೆಸುವುದು. ಈ ಹುಲ್ಲು ಹೊದೆಸದಿದ್ದರೆ ಮನೆಯ ಒಳಗೂ ಹೊರಗೂ ವ್ಯತ್ಯಾಸವಿಲ್ಲದಂತೆ ತುಂಬಿಕೊಳ್ಳುತ್ತಿದ್ದ ಮಳೆಯ ನೀರು ನಮ್ಮ ಮನೆಯ ಬೇಡದ ಆಸ್ತಿಯಾಗಿರುತ್ತಿತ್ತು. ಅವ್ವನ ಒತ್ತಾಯಕ್ಕೆ ಅಪ್ಪ ಮುಂಜಾಗ್ರತೆಯಾಗಿ ಕೆಲವೊಂದು ಸಲ ಸಿದ್ಧತೆ ಮಾಡಿಕೊಳ್ಳುತ್ತಿತ್ತು. ಆದರೆ, ಒಂದು ವರ್ಷ ಮಳೆ ಬೇಗನೆ ಪ್ರಾರಂಭವಾಗಿ ಒಂದು ವಾರದವರೆಗೂ ಬಿಡದೆ ಸುರಿಯುತ್ತಿತ್ತು. ಗುಡಿಸಲು ಸೋರುತ್ತಲೇ ಇತ್ತು. ಎಷ್ಟು ಚೊಂಬು, ಗಂಗಾಳ, ಲೋಟ, ಮಡಿಕೆ ಇಟ್ಟರೂ ಎಲ್ಲಾ ಕಡೆ ಸೋರುತಿತ್ತು. ನಮ್ಮಪ್ಪ ಹೆಗ್ಗಂಬಕ್ಕೆ ಒರಗಿಕೊಂಡು ಬೀಡಿ ಸೇದಿ ಅಲ್ಲೇ ನಿದ್ರಿಸುತ್ತಿದ್ದ. ಪುಟ್ಟ ಅಡುಗೆಮನೆಯಲ್ಲಿ ನಾನು, ಅವ್ವ, ಅಕ್ಕ, ಮಂಜಣ್ಣ ಸೋರುವ ಹನಿಯಲ್ಲೆ ನಿದ್ರೆ-ಎಚ್ಚರದಲ್ಲಿ ರಾತ್ರಿ ಕಳೆಯುತ್ತಿದ್ದೆವು. ನೀರಿನ ಹನಿ ಎಲ್ಲಿಗೆ ಬಿದ್ದರೂ ಸಹಿಸಿಕೊಳ್ಳುತ್ತಿದ್ದೆ. ಆದರೆ, ನೇರವಾಗಿ ಕಿವಿಗೆ ಬಿದ್ದರೆ ಮಾತ್ರ ಮಹಾಹಿಂಸೆ! ಆ ದಿನ ರಾತ್ರಿ ಎರಡು ಹೆಗ್ಗಂಬಕ್ಕೆ ಹಾಕಿದ ತೊಲೆ ಸ್ವಲ್ಪ ಕುಟ್ಟು ಹಿಡಿದಂತಾಗಿ ಜೋರು ಗಾಳಿ ಬಂದಾಗೆಲ್ಲ ಮರ ಮುರಿದು ಬೀಳುವ ಶಬ್ದ ಬರುತ್ತಿತ್ತು. ಆಗ ಅವ್ವ, 'ಈ ಗಾಳಿ ಮಳೆಯಲ್ಲಿ ಮನೆ ಮುರಿದು ಬಿದ್ದು ಎಲ್ಲರದು ಜೀವ ಒಟ್ಟಿಗೇ ಹೋಗಲಿ. ನಿಮ್ಮಪ್ಪನಿಗೆ ಏನೇ ಹೇಳಿದ್ರೂ ಕೇಳಲ್ಲ. ಮನೆ ರಿಪೇರಿ ಮಾಡಿ ಹುಲ್ಲು ಹೊದೆಸಿ ಎಂದು ಸಾವಿರ ಸಲ ಹೇಳಿದ್ರೂ ಕಿವಿ ಮೇಲೆ ಹಾಕಿಕೊಳ್ಳಲ್ಲ. ನನ್ನ ಮಕ್ಕಳು ಸಾಯಲಿ ಅಂತ ಕೂತಾನೆ' ಎಂದು ಬೈತಾ ಇದ್ರೆ, ಮಾತು ಶುರು ಮಾಡುವುದಕ್ಕೆ ಧೈರ್ಯ ತಂದುಕೊಳ್ಳಲು ಕೆಮ್ಮುತ್ತಾ ಕೆಮ್ಮುತ್ತಾ ಕೆಮ್ಮಿನಲ್ಲಿ ಮಾತು ಸೇರಿಸಿ, 'ಹೂ... ಸುಮ್ಮನಿರು, ಮನುಷ್ಯರು ಮನೆಯಲ್ಲಿದ್ದರೆ ಮನೆ ಮುರಿದುಬೀಳಲ್ಲ' ಎಂದು ಅಪ್ಪ ಹೇಳಿದ್ದಕ್ಕೆ ಅವ್ವ, 'ನೀನು ಮಾಡದೇ ಇರುವುದಕ್ಕೆ ಕಥೆ ಪುರಾಣ ಹೊಡಿಬೇಡ. ನಾನು ನನ್ನ ಮಕ್ಕಳು ಸತ್ತರೆ ಜೀವ ವಾಪಸ್ಸು ತರುತ್ತೀಯಾ? ನಿಂಗೆ ಹೇಳಿಬಿಟ್ಟವ ಹೆಗ್ಗಂಬ? ನೀವು ಇದ್ದಾಗ ಬೀಳಲ್ಲ ಅಂತ?' ಇಂತಹ ಮಾತುಗಳ ನಡುವೆಯೇ ಯಾವಾಗಲೋ ಮಳೆ ನಿಂತಿರಬೇಕು - ಎಲ್ಲರಿಗೂ ನಿದ್ರೆ ಬಂದು, ಮುಂಜಾನೆ ಕೋಳಿ ಕೂಗಿದಾಗಲೇ ನಮಗೆಲ್ಲ ಎಚ್ಚರ. ಸದ್ಯ, ಮನೆ ಬಿದ್ದಿರಲಿಲ್ಲ. ಮಾಮೂಲಿ ಎಂದಿನಂತೆ ನಾನು ಸ್ಕೂಲಿಗೆ ಹೋದೆ. ಅವ್ವ ಕೂಲಿಗೆ ಹೋಯಿತು.

ನಾವೆಲ್ಲ ಈ ಕಡೆ ಬಂದ ಮೇಲೆ ಮನೆಯಲ್ಲಿ ಪೋಲಿಯೊ ಆಗಿರುವ, ನಡೆದಾಡುವುದಕ್ಕೆ ಸಾಧ್ಯವೇ ಇರದ ಮಂಜಣ್ಣ ಒಬ್ಬನೇ ಇರುತ್ತಾನೆ ಎನ್ನುವ ಚಿಂತೆ ನನ್ನ ಮನಸ್ಸಿಗೆ ಬಂದರೂ, ಅಪ್ಪ ಹೇಳುತ್ತಲ್ಲ - 'ಮನೆಯಲ್ಲಿ ಮನುಷ್ಯರಿದ್ದರೆ ಮನೆ ಮುರಿದು ಬೀಳುವುದಿಲ್ಲ' ಎಂದು, ಆ ನಂಬಿಕೆಯಲ್ಲಿ ಶಾಲೆಯಲ್ಲಿದ್ದೆ. ಮಧ್ಯಾಹ್ನದ ಹೊತ್ತಿಗೆ ಯಾಕೋ ಮನಸ್ಸು ತಡೆಯಲಿಲ್ಲ. ಮನೆ ಹತ್ತಿರ ಓಡಿ ಹೋದೆ, ನೋಡಿದರೆ ಎರಡು ಹೆಗ್ಗಂಬ ಹಾಗೇ ನಿಂತಿದ್ದವು. ಗುಡಿಸಲು ಮುರಿದು ಬಿದ್ದಿತ್ತು. ನನಗೆ ಅಳು ಬರುತ್ತಿತ್ತು. ಅಪ್ಪ ಆ ಕಡೆ ಗಳ ಮತ್ತು ತಡಿಕೆ ಎಳೆಯುತ್ತಿತ್ತು. ನಾನು ಅಳುತ್ತಲೇ, 'ಅಪ್ಪ ಮಂಜಣ್ಣ?' ಎಂದೆ. ಅಪ್ಪ ನನ್ನ ಮಾತಿಗೆ ಉತ್ತರ ಕೊಡಲಿಲ್ಲ. ಮತ್ತೆ ಜೋರಾಗಿ ಕೇಳಿದೆ. ಅದಕ್ಕೆ ಪಕ್ಕದಲ್ಲಿ ಇದ್ದ ಅಜ್ಜಿಯೊಬ್ಬರು, 'ಬೆಳಿಗ್ಗೆನೇ ನಿಮ್ಮವ್ವ ನಮ್ಮ ಮನೆಗೆ ಬಿಟ್ಟು ಹೋಗಿದ್ದಾಳೆ' ಅಂದಾಗ ಸಮಾಧಾನ ಆಯ್ತು. ಅಪ್ಪ ಆ ಕಡೆ ಎಲ್ಲವನ್ನೂ ಸಿಟ್ಟಿನಿಂದ ಮಾಡುತ್ತಿತ್ತು. ಅಪ್ಪನ ಹತ್ತಿರ ಹೋಗಿ, 'ಅಪ್ಪ, ನಾನೂ ಬರಲಿ?' ಅಂದೆ. 'ಎಲ್ಲಿಗೆ ಬರುತ್ತೀಯಾ? ಹೋಗು ಸ್ಕೂಲಿಗೆ... ಅದಕ್ಕೆ ಬೇರೆ ನಿಮ್ಮವ್ವ ಬಂದು ಬೈತಾಳೆ' ಅಂದ. ಅಂತೂ ನಾವು ಮನೆಯಲ್ಲಿ ಇದ್ದಾಗ ಗುಡಿಸಲು ಬೀಳಲ್ಲ ಅಂತ ಅಪ್ಪನಿಗೆ ಹೆಂಗೆ ಗೊತ್ತಾಯ್ತು? ಉತ್ತರ ಇನ್ನೂ ಸಿಕ್ಕಿಲ್ಲ.

ಮತ್ತೆ ಮಳೆ ಹುಯ್ಯುತ್ತಿದೆ... ಎಲ್ಲ ನೆನಪಾಗುತ್ತಿದೆ...